

ತುಸು ಹೆಚ್ಚೇ ಎನ್ನುವಂತಹ ಸಲುಗೆ ಬೆಳೆಸಿಕೊಂಡು ಮಾತನಾಡುತ್ತಿದ್ದರು. ವರ್ಷಗಳುರುಳಿದಂತೆ ಸಾಗಿ ಬಂದ ಅವರಿಬ್ಬರ ಸ್ನೇಹ ಶ್ರೀಕಂಠನ ಮನಸ್ಸಿನಲ್ಲಿ ಸ್ನೇಹದಾಚೆಗಿನ ಸೆಳೆತ ಹುಟ್ಟಿ ಮೊಳಕೆಯೊಡೆಯಿತು. ಅನ್ನಪೂರ್ಣಳ ಮನಸ್ಸು ಇದಕ್ಕೆ ಹದಗೊಂಡಿದ್ದರಿಂದ ಅವರ ಮನಸುಗಳು ಬೆಸೆದು ಪ್ರೀತಿಯೊ ಅಥವಾ ದೈಹಿಕದಾಸೆಯೊ ಬೆಳೆಯುವುದು ತಡವಾಗಲಿಲ್ಲ.

ಅನ್ನಪೂರ್ಣ, ಶ್ರೀಕಂಠನ ಜೊತೆ ಸಲುಗೆ ಬೆಳೆದಂತೆಯೇ ಆಕೆಗೆ ಮನೆಯಲ್ಲಿ ಗಂಡ ಮತ್ತು ಮಕ್ಕಳೊಂದಿಗೆ ಮೊದಲಿನಂತೆ ಇರಲು ಸಾಧ್ಯವಾಗದೇ ಹೋಯಿತು. ಒಮ್ಮೊಮ್ಮೆ ಊಟವೂ ಸೇರದಂತೆ ಇಡೀ ದಿನ ದ್ವಂದ್ವ ಯೋಚನೆಗಳಲ್ಲಿಯೇ ಮುಳುಗಿರುತ್ತಿದ್ದಳು. ಒಮ್ಮೊಮ್ಮೆ 'ನಾನು ಈ ಮನೆಯಲ್ಲಿದ್ದು ಕಂಡಿರುವ ಸುಖವಾದರೂ ಏನು? ಎಳೆ ವಯಸ್ಸಿನ ನನ್ನನ್ನು ಮದುವೆಯಾಗಿ ಗಂಡ ಎಂದಾದರೂ ಒಂದು ದಿನ ಮುಕ್ತವಾಗಿ, ಪ್ರೀತಿಯಿಂದ ಮಾತನಾಡಿದ್ದಾನಾ? ಒಂದಿಷ್ಟು ಹೊತ್ತಾದ್ರೂ ನಗು ನಗುತಾ ಸಲ್ಲಾಪದ ಮಾತುಗಳನ್ನು ಆಡಿದನೇ! ಅದೂ ಇಲ್ಲ! ಒಂದು